## ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ರಾಯಚೂರು ವಿಭಾಗ, ರಾಯಚೂರು

ಸಂ: ಕಕರಸಾ/ರಾವಿ/ಸಿಬ್ಬಂದಿ/ನೇಮಕ/2908/2023-24 ದಿನಾಂಕ: 27/12/2023

**ಜಾಹೀರಾತು ಸಂ.02/2023**

-*-*-*-*-*-o

ಕ.ಕ.ರ.ಸಾ.ನಿಗಮ, ರಾಯಚೂರು ವಿಭಾಗದಲ್ಲಿ ಶಿಶಿಕ್ಷು ಕಾಯಿದೆ 1961 ರನ್ವಯ ಈ ಕೆಳಕಂಡ ತಾಂತ್ರಿಕ ಶಿಶಿಕ್ಷು (ಆಟೋ ಮೆಕ್ಯಾನಿಕ್, ಆಟೋ ವಿದ್ಯುತ್, ಆಟೋ ವೆಲ್ಡರ್, ಆಟೋ ಬಾಡಿ ಫೀಟರ್, ಆಟೋ ಪೆಂಟರ್, ಆಟೋ ಮಷನಿಷ್ಟ್), ವೃತ್ತಿಯಲ್ಲಿ ಶಿಶಿಕ್ಷು ತರಬೇತಿ ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಆಯಾ ವೃತ್ತಿಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ ಹೊಂದಿದಲ್ಲಿ, ಆನ್ ಲೈನ್ ಮೂಲಕ ರಿಜಿಸ್ಟರ್ ಮಾಡಿದ ಅರ್ಜಿ ಹಾಗೂ ಅಭ್ಯರ್ಥಿಗಳು ಭರ್ತಿ ಮಾಡಿದ ನಿಗಧಿತ ಅರ್ಜಿ & ಮೂಲ ದಾಖಲಾತಿ ಹಾಗೂ ಒಂದು ಸೆಟ್ ಜೆರಾಕ್ಸ್ ಪ್ರತಿಗಳೊಂದಿಗೆ **ದಿನಾಂಕ: 11 .01.2024** ರಂದು ಬೆಳಗ್ಗೆ **10:00** ಗಂಟೆಗೆ **ಕ.ಕ.ರ.ಸಾ.ನಿಗಮ, ವಿಭಾಗೀಯ ಕಛೇರಿ, ರಾಯಚೂರು ವಿಭಾಗ, ರಾಯಚೂರು ಇಲ್ಲಿ** ನಡೆಯುವ ನೇರ ಸಂದರ್ಶನಕ್ಕೆ ಆಯ್ಕೆ ಸಮಿತಿಯ ಮುಂದೆ ಹಾಜರಾಗಲು ತಿಳಸಲಾಗಿದೆ. ಈ ಬಗ್ಗೆ ಪ್ರತ್ಯೇಕ ಸಂದರ್ಶನ ಪತ್ರ ಕಳುಹಿಸಲಾಗುವುದಿಲ್ಲ.

| ಕ್ರಸ | ವೃತ್ತಿಯ ಹೆಸರು/ಖಾಲಿ ಇರುವ ಘಟಕಗಳ ಮಾಹಿತಿ | ವಿಭಾಗೀಯ ಕಾರ್ಯಾಗಾರ/ ಟಿ.ಆರ್.ಪಿ | ರಾಯಚೂರು-2 | ರಾಯಚೂರು-3 | ಲಿಂಗಸ್ಗೂರು | ಸಿಂಧನೂರು | ಮಾನ್ವಿ | ದೇವದುರ್ಗ | ಮಸ್ಕಿ | ಒಟ್ಟು | ತರಬೇತಿ ಅವಧಿ |
|---|---|---|---|---|---|---|---|---|---|---|---|
| 1 | ಆಟೋ ಮೆಕಾನಿಕ್ | - | 12 | 12 | 8 | 8 | - | 6 | - | 46 | 1 ವರ್ಷ |
| 2 | ಆಟೋ ವಿದ್ಯುತ್ | 7 | 7 | 6 | 4 | 4 | - | - | - | 28 | 1 ವರ್ಷ |
| 3 | ಆಟೋ ವೆಲ್ಡರ್ | 2 | 6 | 6 | 4 | 2 | - | - | - | 20 | 1 ವರ್ಷ |
| 4 | ಆಟೋ ಬಾಡಿ ಫೀಟರ್ | 3 | 4 | 4 | 2 | 1 | - | 6 | - | 20 | 1 ವರ್ಷ |
| 5 | ಆಟೋ ಪೇಂಟರ | 2 | 3 | 2 | 1 | 1 | - | 1 | - | 10 | 1 ವರ್ಷ |
| 6 | ಆಟೋ ಮೆಷಿನಿಸ್ಟ್ | - | 3 | 3 | 2 | 1 | - | - | - | 9 | 1 ವರ್ಷ |
| | ಒಟ್ಟು | 14 | 35 | 33 | 21 | 17 | - | 13 | - | 133 | 1 ವರ್ಷ |

**ಸೂಚನೆ** :

01. ಕ್ರಮ ಸಂ. 1 ರಿಂದ 6 ವೃತ್ತಿಗಳಿಗೆ ಆಟೋ ಮೆಕ್ಯಾನಿಕ್, ಆಟೋ ವಿದ್ಯುತ್, ಆಟೋ ವೆಲ್ಡರ್, ಆಟೋ ಬಾಡಿ ಫೀಟರ್ ಆಟೋ ಪೆಂಟರ್, ಆಟೋ ಮಷನಿಷ್ಟ್ ಸಂಬಂಧಿಸಿದ ವೃತ್ತಿಗಳಲ್ಲಿ ಐ.ಟಿ.ಐ. ಉತ್ತೀರ್ಣರಾಗಿರುವ ಬಗ್ಗೆ ಪ್ರಮಾಣ ಪತ್ರ ಹೊಂದಿದ್ದ ಅಭ್ಯರ್ಥಿಗಳು ಅರ್ಹರಿರುತ್ತಾರೆ.

1. **ವಯೋಮಿತಿ**: ದಿನಾಂಕ: **31/12/2023** ಕ್ಕೆ **18** ವರ್ಷ ಪೂರ್ಣಗೊಂಡಿರಬೇಕು. ಹಾಗೂ ಗರಿಷ್ಠ ವಯೋಮಿತಿ **40** ವರ್ಷ ಮೀರಿರಬಾರದು.

2. **ಮೀಸಲಾತಿ**: ಪರಿಶಿಷ್ಟಜಾತಿ-**23**, ಪರಿಶಿಷ್ಟ ಪಂಗಡ-**09.**

3. **ತರಬೇತಿ ಭತ್ಯೆ** : ಸರ್ಕಾರ/ ನಿಗಮದ ಚಾಲ್ತಿಯರುವ ನಿಯಮಾನುಸಾರ ನೀಡಲಾಗುವುದು.

.... 2

**ವಿಶೇಷ ಸೂಚನೆ:**

1. **ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು www.apprenticeshipindia.org ನ Home Page ನಲ್ಲಿ Registration Candidate Registration ನಲ್ಲಿ ವಿವರವನ್ನು ಕಡ್ಡಾಯವಾಗಿ ನಮೂದಿಸುವುದು. ನಂತರ ಇ-ಮೇಲ್ ನಲ್ಲಿ Activation ಮಾಡಿದ ನಂತರ Email user ID & Email pass ward- login pass ward ಆಗಿರುತ್ತದೆ. ಲಾಗಿನ್ ಆದ ನಂತರ Candidate dashboard ನಲ್ಲಿ ವಿವರಗಳನ್ನು ನಮೂದಿಸುವುದು. ಪೂರ್ಣ ವಿವರಗಳನ್ನು ನಮೂದಿಸಿ, ಸಂಬಂಧಿಸಿದ ದಾಖಲಾತಿಗಳನ್ನು ಆನ್‌ಲೈನ್‌ನಲ್ಲಿ ಅಪ್‌ಡೇಟ್ ಮಾಡಿರುವ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು. ಅಪೂರ್ಣ ವಿವರಗಳುಳ್ಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.**

2. ಶಿಶಿಕ್ಷುಗಳು ಆನ್‌ಲೈನ್ ನೊಂದಣಿಗೆ ಆಧಾರ್ ಕಾರ್ಡ್ ಹಾಗೂ ಎಸ್.ಎಸ್.ಎಲ್.ಸಿ ಅಂಕಪಟ್ಟಿ ವಿವರಗಳು (ಹೆಸರು, ಹುಟ್ಟಿದ ದಿನಾಂಕ, ಪೋಷಕರ ಹೆಸರು) ಒಂದಕ್ಕೊಂದು ತಾಳೆಯಾಗುವಂತಿರಬೇಕು ಇಲ್ಲವಾದಲ್ಲಿ ಆನ್‌ಲೈನ್ ನೊಂದಣಿಯಲ್ಲಿ ಅಡಚಣೆ ಉಂಟಾದರೆ ಸಂಸ್ಥೆ ಯಾವುದೇ ರೀತಿಯ ಹೊಣೆಗಾರಿಕೆ ಹೊಂದುವುದಿಲ್ಲ.

3. ಶಿಶಿಕ್ಷು ಕಾಯಿದೆ 1961 ರನ್ವಯ ಈಗಾಗಲೇ ಶಿಶಿಕ್ಷು ತರಬೇತಿ ಪಡೆದಿರುವವರು (ಯಾವುದೇ ವಿಭಾಗದಲ್ಲಿ) ಅರ್ಜಿ ಸಲ್ಲಿಸಲು ಅರ್ಹರಲ್ಲ. ಒಂದು ವೇಳೆ ಅಂತಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಲ್ಲಿ ಅವರ ವಿರುದ್ಧ ಪೋಲಿಸ್ ಮೊಕದ್ದಮೆ ದಾಖಲಿಸಲಾಗುವುದು

4. ತರಬೇತಿ ಪಡೆಯುವ ಅಭ್ಯರ್ಥಿಗಳಿಗೆ ತರಬೇತಿ ಮುಗಿದ ನಂತರ ನಿಗಮದಲ್ಲಿ ಕೆಲಸ ಒದಗಿಸುವ ಬಗ್ಗೆ ಯಾವುದೇ ಒಪ್ಪಂದಕ್ಕೆ ಒಳಪಟ್ಟಿರುವುದಿಲ್ಲ.

5. ತರಬೇತಿ ಪಡೆಯಲು ಆಯ್ಕೆಯಾದವರು ಶಿಶಿಕ್ಷು ಕಾಯಿದೆ 1961 ರ ನಿಯಮಗಳು ಹಾಗೂ ತದನಂತರದ ತಿದ್ದುಪಡಿಗಳ ಷರತ್ತು ಹಾಗೂ ನಿಬಂಧನೆಗಳಿಗೆ ಒಳಪಡುತ್ತಾರೆ.

6. ಆಯ್ಕೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಶಿಫಾರಸ್ಸು ಅಥವಾ ಒತ್ತಡಗಳಿಗೆ ಆಸ್ಪದ ಇರುವುದಿಲ್ಲ. ಆಯ್ಕೆ ಸಂಬಂಧ ಪ್ರಾಧಿಕಾರಸ್ಥರ/ಆಯ್ಕೆ ಸಮಿತಿ ತೀರ್ಮಾನವೇ ಅಂತಿಮ ತೀರ್ಮಾನ. ಈ ಬಗ್ಗೆ ಪತ್ರ ವ್ಯವಹಾರಕ್ಕೆ ಆಸ್ಪದ ಇರುವುದಿಲ್ಲ.

7. ಕನ್ನಡ ಭಾಷೆಯನ್ನು ಓದಲು, ಬರೆಯಲು ಮತ್ತು ಮಾತನಾಡಲು ಬರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಿರುತ್ತಾರೆ.

8. ಶಿಶಿಕ್ಷು ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳು ರಾಯಚೂರು ವಿಭಾಗದ ರಾಯಚೂರು ಘಟಕ-2, ರಾಯಚೂರು ಘಟಕ-3/ ಲಿಂಗಸ್ಗೂರು ಘಟಕ/ ಸಿಂಧನೂರು ಘಟಕ/ ಮಾನವಿ ಘಟಕ/ ದೇವದುರ್ಗ ಘಟಕ/ ಮಸ್ಕಿ ಘಟಕ/ ವಿಭಾಗೀಯಾ ಕಾರ್ಯಾಗಾರಗಳಿಗೆ ನಿಯೋಜಿಸಿದ ಯಾವುದೇ ಸ್ಥಳದಲ್ಲಿ ತರಬೇತಿ ಪಡೆಯಲು ಸಿದ್ಧರಿರಬೇಕು.

9. ಶಿಶಿಕ್ಷು ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳು ದೈಹಿಕ ಅರ್ಹತೆ ಪಡೆದಿರಬೇಕು ಮತ್ತು ತರಬೇತಿಗೆ ಹಾಜರಾಗುವ ಮುನ್ನ ಜಿಲ್ಲಾ ಶಸ್ತ್ರ ಚಿಕಿತ್ಸಕರಿಂದ ವೈದ್ಯಕೀಯ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು.

10. ನಿಗಮದಲ್ಲಿ ಅವಶ್ಯಕತೆಗನುಗುಣವಾಗಿ ಪ್ರಕಟಿಸಿರುವ ಶಿಶಿಕ್ಷು ತರಬೇತಿಗಳ ಸಂಖ್ಯೆಯು ಅವಶ್ಯಕತೆಗೆ ಅನುಗುಣವಾಗಿ ಬದಲಾಗುವ ಸಾಧ್ಯತೆ ಇರುತ್ತದೆ.

11. **ಆಯ್ಕೆಯಾದ ಅಭ್ಯರ್ಥಿಗಳು ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಖಾತೆ ಹೊಂದಿರುವುದು, ಆಧಾರ್ ಕಾರ್ಡ್ ಸಂಖ್ಯೆಯನ್ನು ಬ್ಯಾಂಕ್ ಖಾತೆಗೆ ಲಿಂಕ್ ಮಾಡಿಸಿರಬೇಕು, ಆಧಾರ್ ಕಾರ್ಡ್ ಸಂಖ್ಯೆಯನ್ನು ಖಾತೆಗೆ ಲಿಂಕ್ ಮಾಡಿರುವ ಬಗ್ಗೆ ಮಾಹಿತಿ ನೀಡುವುದು. ಹಾಗೂ ಇಮೇಲ್ ಐಡಿ, ಮೊಬೈಲ್ ಸಂಖ್ಯೆ ಮತ್ತು ಆಧಾರ್ ಕಾರ್ಡ್ ಹೊಂದಿರುವುದು ಕಡ್ಡಾಯವಾಗಿರುತ್ತದೆ.**

.....3

12. ಆನ್‌ಲೈನ್‌ನಲ್ಲಿ ಅಪ್‌ಡೇಟ್ ಮಾಡಿರುವ ಅರ್ಜಿಯ ಜೊತೆ ಈ ಜಾಹೀರಾತಿನೊಂದಿಗೆ ಲಗತ್ತಿಸಲಾದ ಅರ್ಜಿಯ ನಮೂನೆಯನ್ನು ಅಭ್ಯರ್ಥಿಗಳು ತಮ್ಮ ಸ್ವಂತ ಕೈ ಬರಹ ಅಥವಾ ಬೆರಳಚ್ಚುಗೊಳಿಸಿ ಭರ್ತಿ ಮಾಡಿ, ಸದರಿ ಅರ್ಜಿಯೊಂದಿಗೆ ಜನ್ಮ ದಿನಾಂಕ, ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಪ್ರಮಾಣಪತ್ರ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ ನಕಲು ಪ್ರತಿ ಮತ್ತು ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡಗಳ ಅಭ್ಯರ್ಥಿಗಳು ಜಾತಿ / ಆದಾಯ ಪ್ರಮಾಣ ಪತ್ರಗಳ ನಕಲು ಪತ್ರಿಗಳನ್ನು ಹಾಗೂ ಇತ್ತೀಚಿನ 02 ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳನ್ನು ಅರ್ಜಿಯೊಂದಿಗೆ ಲಗತ್ತಿಸಿ ಈ ಕೆಳಕಂಡ ವಿಳಾಸದಲ್ಲಿ **ದಿನಾಂಕ: 11 .01.2024** ರಂದು **ಬೆಳ್ಳಿಗೆ 10-00** ಗಂಟೆಗೆ ಅರ್ಜಿಯೊಂದಿಗೆ ಲಗತ್ತಿಸಿದ ಎಲ್ಲಾ ಮೂಲ ದಾಖಲಾತಿಗಳೊಂದಿಗೆ ಆಯ್ಕೆಸಮಿತಿಯ ಮುಂದೆ ನಿಮ್ಮ ಸ್ವಂತ ಖರ್ಚಿನಲ್ಲಿ ನೇರ ಸಂದರ್ಶನಕ್ಕೆ (Walk in interview) ಹಾಜರಾಗುವುದು.

ವಿಳಾಸ
ವಿಭಾಗೀಯ ನಿಯಂತ್ರಣಾಧಿಕಾರಿ
ಕ.ಕ.ರ.ಸಾ.ನಿಗಮ, ವಿಭಾಗೀಯ ಕಛೇರಿ,
ಯರರೇರಾ ರಸ್ತೆ, ರಾಯಚೂರು

ಸಹಿ/-
**ವಿಭಾಗೀಯ ನಿಯಂತ್ರಣಾಧಿಕಾರಿ,**
**ಕ.ಕ.ರ.ಸಾ.ನಿಗಮ, ರಾಯಚೂರು ವಿಭಾಗ**
**ರಾಯಚೂರು.**

ಪ್ರತಿಯನ್ನು ವಂದನಾಪೂರ್ವಕವಾಗಿ:-

- ✓ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು, ಕಕರಸಾಸಂಸ್ಥೆ, ಕೇಂದ್ರ ಕಛೇರಿ, ಕಲಬುರಗಿ ರವರ ಸೂಕ್ತ ಮಾಹಿತಿಗಾಗಿ ಸಲ್ಲಿಸಲಾಗಿದೆ.
- ✓ ಮುಖ್ಯ ಯಾಂತ್ರಿಕ ಅಭಿಯಂತರರು ಹಾಗೂ ರಾಯಚೂರು ವಿಭಾಗದ ಉಸ್ತುವಾರಿ ಅಧಿಕಾರಿ, ಕೇಂದ್ರ ಕಛೇರಿ, ಕಲಬುರಗಿ ರವರ ಸೂಕ್ತ ಮಾಹಿತಿಗಾಗಿ ಸಲ್ಲಿಸಲಾಗಿದೆ.
- ✓ ಜಂಟಿ ನಿರ್ದೇಶಕರು (ತರಬೇತಿ) ಮತ್ತು ಎಕ್ಸ್ ಆಫಿಷಿಯೋ ಹಾಗೂ ಜಂಟಿ ಶಿಶಿಕ್ಷು ಸಲಹೆಗಾರರು, ವಿಭಾಗೀಯ ಕಛೇರಿ, (ಉದ್ಯೋಗ ಮತ್ತು ತರಬೇತಿ ಇಲಾಖೆ) ಸರಕಾರಿ ಐ.ಟಿ.ಐ. ಹತ್ತಿರ ನ್ಯಾಷನಲ್ ಪೆಟ್ರೋಲಿಯಂ ಪಕ್ಕ ಎಂ.ಎಸ್.ಕೆ. ಮಿಲ್, ರಸ್ತೆ, ಕಲಬುರಗಿ -585102 ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
- ✓ ಪ್ರಾಚಾರ್ಯರು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ರಾಯಚೂರು ರವರ ಮಾಹಿತಿಗಾಗಿ.

ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ಕ.ರ.ಸಾ.ನಿಗಮ, ರಾಯಚೂರು ವಿಭಾಗ
ರಾಯಚೂರು.

ಪ್ರತಿಯನ್ನು:- ವಿಭಾಗೀಯ ತಾಂತ್ರಿಕ ಶಿಲ್ಪಿ/ಎಲ್ಲಾ ಶಾಖಾ ಮುಖ್ಯಸ್ಥರು, ಕ.ಕ.ರ.ಸಾ. ಸಂಸ್ಥೆ, ವಿಭಾಗೀಯ ಕಛೇರಿ, ರಾಯಚೂರು ರವರ ಮಾಹಿತಿಗಾಗಿ ಕಳುಹಿಸಿದೆ.

ಪ್ರತಿಯನ್ನು:- ಎಲ್ಲಾ ಘಟಕ ವ್ಯವಸ್ಥಾಪಕರು, ಕಕರಸಾಸಂಸ್ಥೆ, ರಾಯಚೂರು ವಿಭಾಗ ರವರುಗಳ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದ್ದು, ಈ ಜಾಹಿರಾತನ್ನು ಕಛೇರಿ / ಬಸ್ ನಿಲ್ದಾಣಗಳಲ್ಲಿ / ಸಂಚಾರ ಬಿಂದುಗಳ ಸೂಚನಾ ಫಲಕದಲ್ಲಿ ಪ್ರಕಟಿಸುವ ಜೊತೆಗೆ ಉದ್ಯೋಗಿಗಳ ಗಮನಕ್ಕೆ ತಂದು ತಮ್ಮ ಘಟಕಗಳ ವ್ಯಾಪ್ತಿಯಲ್ಲಿ ಶಿಶಿಕ್ಷು ತರಬೇತುದಾರರ ನಿಯೋಜನೆಗೆ ಅನುಕೂಲವಾಗುವಂತೆ ವ್ಯಾಪಕವಾಗಿ ಪ್ರಚಾರ ಮಾಡಲು ಸೂಚಿಸಿದೆ.